# ಹೊಸತು




## ತ್ವಚೆಯ ಆರೈಕೆಗೆ ರಿಸ್ಟೈಲೇನ್

ತ್ವಚೆಯ ಆರೈಕೆಗಾಗಿಯೇ ಗ್ಲಾಡರ್ಮಾ ಸಂಸ್ಥೆ ರಿಸ್ಟೈಲೇನ್ ವೈಟಲ್ ಸ್ಕಿನ್‌ಬೂಸ್ಟರ್ಸ್ ಎಂಬ ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದು ನೈಸರ್ಗಿಕವಾಗಿ ತ್ವಚೆಯ ಆಳದಲ್ಲಿ ಪುನರ್ಜಲೀಕರಣ ಮಾಡುತ್ತದೆ. ಜತೆಗೆ ತ್ವಚೆಗೆ ಹೊಸ ಚೈತನ್ಯ ತುಂಬಲಿದೆ ಎನ್ನುತ್ತದೆ ಕಂಪೆನಿ.

ಇದರ ಬಳಕೆಯಿಂದ ಚರ್ಮ ಮೃದು, ಆಕರ್ಷಕವಾಗಿ ಕಾಣುವುದಲ್ಲದೆ, ತ್ವಚೆ ಒರಟಾಗುವುದನ್ನು ತಡೆಯಲಿದೆ. ತ್ವಚೆಯಲ್ಲಿನ ತೇವಾಂಶವನ್ನು ಹಿಡಿದಿಟ್ಟುಕೊಂಡು ಕಾಂತಿಯುಕ್ತವಾಗುವಂತೆ ಮಾಡುತ್ತದೆ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ 9916748859




## ಟೈಟಾನ್ ಸ್ಕಿನ್ ಸುಗಂಧ

ಗುಣಮಟ್ಟದ ವಾಚುಗಳಿಗೆ ಹೆಸರಾದ ಟೈಟಾನ್ ಕಂಪೆನಿ ಇದೀಗ 'ಸ್ಕಿನ್' ಸುಗಂಧ ದ್ರವ್ಯ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಫ್ರಾನ್ಸ್‌ನಲ್ಲಿ ತಯಾರಿಸಲಾದ ಈ ಸುಗಂಧ ದ್ರವ್ಯ ವಿದೇಶಿ ಗಿಡಮೂಲಿಕೆಗಳಿಂದ ತಯಾರಾಗಿದೆ. ಈ ಸರಣಿಯಲ್ಲಿ ಒಟ್ಟು ಆರು ವೈವಿಧ್ಯದ ಸುಗಂಧ ದ್ರವ್ಯಗಳಿವೆ.

ಈ ಆರು ಸುಗಂಧ ದ್ರವ್ಯಗಳು ಮಹಿಳೆಯರ ಆಯ್ಕೆಗಳಾದ ನ್ಯೂಡ್, ಸೆಲೆಸ್ಟ್, ಇಮೇರಾ ಯೂ ಡಿ ಗಳನ್ನು ಹೊಂದಿವೆ. ಜೊತೆಗೆ ಪುರುಷರ ಆಯ್ಕೆಗಳಾದ ಎಕ್ಸ್‌ಟ್ರೀಮ್ ಮತ್ತು ಸ್ಟೀಲೆ ಯೂ ಡಿ ಕೂಡ ಇದೆ. 50 ಎಂಎಲ್ ಸೀಸೆಯ ಬೆಲೆ ₹ 990 ಮತ್ತು 100 ಎಂಎಲ್ ಸೀಸೆಯ ಬೆಲೆ ₹ 1790.

ಮಾಹಿತಿಗೆ: 9620084349

## ಓಲ್ಡ್ ಸ್ಪೈಸ್ ಡಿಯೊಡರೆಂಟ್




ಪ್ರಾಕ್ಟರ್ ಅಂಡ್ ಗ್ಯಾಂಬಲ್ ಕಂಪೆನಿ ಓಲ್ಡ್ ಸ್ಪೈಸ್ ಡಿಯೊಡರೆಂಟ್ ಅನ್ನು ಪುರುಷರಿಗಾಗಿ ಹೊರತಂದಿದೆ. ತಾಜಾತನಕ್ಕೆ, ನವಯೌವ್ವನತನಕ್ಕೆ, ಸ್ವಚ್ಛ ಹಾಗೂ ದೀರ್ಘಕಾಲ ಉಳಿಯುವ ಈ ಸುವಾಸನೆ ಭರಿತ ಸುಗಂಧ ದ್ರವ್ಯ ಹೆಸರಾಗಿದೆ ಎನ್ನುವುದು ಕಂಪೆನಿ ವಿವರಣೆ.

ಒರಿಜಿನಲ್, ಫ್ರೆಷ್ ಲೈಮ್, ಮಸ್ಕ್ ಮತ್ತು ವೈಟ್ ವಾಟರ್ ಹೀಗೆ ನಾಲ್ಕು ಆಯ್ಕೆಗಳಿವೆ. ಇದು ಪುರುಷರಲ್ಲಿ ಆತ್ಮವಿಶ್ವಾಸ ತುಂಬಲು ಸಹಕಾರಿಯಾಗಿದೆ. ಹೆಚ್ಚು ಶ್ರಮಪಡದೆ ಇತರರು ನಿಮ್ಮನ್ನು ಮೆಚ್ಚುವಂತೆ ಮಾಡುತ್ತದೆ ಎಂದೂ ಕಂಪೆನಿ ಹೇಳಿಕೊಳ್ಳುತ್ತದೆ.

ವಿವರಕ್ಕೆ: 7738570894/ 9820927403

## ನೈಕ್‌ನಿಂದ ಫ್ರೀ ಫ್ಲೈನಿಟ್ ಶೂ





ನೈಕ್ ಕಂಪೆನಿ, ನೈಕ್ ಫ್ರೀ ಫ್ಲೈನಿಟ್ ಎಂಬ ಹೆಸರಿನಲ್ಲಿ ಎರಡು ವಿಭಿನ್ನ ಮಾದರಿಯ ಶೂಗಳನ್ನು ಮಾರುಕಟ್ಟೆಗೆ ತಂದಿದೆ. ಇದು ಕೇವಲ ಬರಿಗಾಲಿನಲ್ಲಿ ನಡೆದಷ್ಟು ಸುಲಭವಾಗಿ ನಡೆಯಲು ಅವಕಾಶ ಮಾಡಿಕೊಡುತ್ತದೆ. ಅಲ್ಲದೆ ಅತ್ಯಂತ ಆರಾಮದಾಯಕ ನಡಿಗೆ ಮತ್ತು ಓಟಕ್ಕೆ ಸಹಕಾರಿಯಾಗಿದೆ ಎನ್ನುವುದು ಕಂಪೆನಿ ವಿವರಣೆ.

ಮಹಿಳೆಯರ ಶೂ ಬೆಲೆ ₹ 12,995 ಮತ್ತು ಪುರುಷರ ಶೂ ಬೆಲೆ ₹ 13,995. ಎಲ್ಲ ನೈಕ್ ಮಳಿಗೆಗಳಲ್ಲಿ ಸಿಗುತ್ತದೆ. ವಿವರಕ್ಕೆ: 9632786829